ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

CC.315/2014

CW- 10

PW- 08

ಪ್ರ.ವ.ಬೋ.ದಿ. 19-04-2022

| | | |
|---|---|---|
| ಹೆಸರು ಶ್ರೀ / ಶ್ರೀಮತಿ | - | ಅಂಬಿಕಾ ಪಾಟೀಲ್ |
| ತಂದೆ / ಗಂಡನ ಹೆಸರು | - | ಸುಂದರ್ |
| ವಯಸ್ಸು | - | 39 ವರ್ಷ |
| ಉದ್ಯೋಗ | - | ಉಪನೋಂದಣಾಧಿಕಾರಿಗಳು , ಬೆಂಗಳೂರು. |
| ವಾಸ ಸ್ಥಳ | - | ಬೆಂಗಳೂರು. |

ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ನಾನು ಹೊನ್ನಾಳಿಯ ಉಪನೋಂದಣಾಧಿಕಾರಿ ಕಛೇರಿಯಲ್ಲಿ ಉಪನೋಂದಣಾಧಿಕಾರಿಯಾಗಿ ಸನ್ 2012 ರಿಂದ 2013 ರ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ಸಾಕ್ಷಿಗೆ ನಿಪಿ.8 ಸ್ಥಳ ಪಂಚನಾಮೆಯನ್ನು ತೋರಿಸಲಾಗಿ , ಸದರಿ ದಾಖಲೆಯನ್ನು ದಿ.25-05-2013 ರಂದು ಹೊನ್ನಾಳಿಯ ಉಪನೋಂದಣಾಧಿಕಾರಿ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ಧು ಅದನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು. ಸಿದ್ದಪ್ಪ ರವರು ದಾಖಲೆಗಳನ್ನು ಕೇಳಿದ್ದು , ಅದನ್ನು ಕೊಡುವ ಸಂದರ್ಭದಲ್ಲಿ ಮಾಡಿರುತ್ತೇನೆ. ನಾನು ಸಹಿಯನ್ನು ಸ್ಥಳ ಪಂಚನಾಮೆ ಕಾಲಕ್ಕೂ ಸಹ ಮಾಡಿರುತ್ತೇನೆ. ದಿ.25-05-2013 ರಂದು ಸ್ಥಳ ಪಂಚನಾಮೆ ಮಾಡಲಾಗಿತ್ತು. ಸದರಿ ಕಾಲಕ್ಕೆ ಸ್ಥಳದಲ್ಲಿ ನಮ್ಮ ಸಿಬ್ಬಂದಿಗಳು, ಇನ್ಸಪೆಕ್ಟರ್ ಇದ್ದರು. ಸ್ಥಳ ಪಂಚನಾಮೆಯನ್ನು ಯಾವ ಸಮಯದಲ್ಲಿ ಮಾಡಲಾಗಿದೆ ಎಂದು ನನಗೆ ನೆನಪಿರುವುದಿಲ್ಲ. ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಈಗ ಸಾಕ್ಷಿಗೆ ಮತ್ತೊಂದು ದಾಖಲೆ ನಿಪಿ.13 ನ್ನು ತೋರಿಸಲಾಗಿ, ಸದರಿ ದಾಖಲೆಗೆ ಸಹಿಯನ್ನು ಯಾವಾಗ ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ದಿ.26-06-2013 ರಂದು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ಧು ಅದನ್ನು ನಿಪಿ.13(ಬಿ) ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಪೊಲೀಸರು ಎಸ್ ಆರ್ ಬುಕ್ ವಶಪಡಿಸಿಕೊಂಡಿರುತ್ತಾರೆ. ಮತ್ತು ಸಿದ್ದಪ್ಪರವರಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಪೊಲೀಸರಿಗೆ ನೀಡಿದ್ಧು ಅದನ್ನು ಅವರು ಪಂಚನಾಮೆ ನಿಪಿ.13 ರ ಮೂಲಕ ವಶಪಡಿಸಿಕೊಂಡಿರುತ್ತಾರೆ. ನಿಪಿ.13 ಅಮಾನತ್ತು ಪಂಚನಾಮೆಯನ್ನು ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 12-00 ಗಂಟೆ ವರೆಗೆ ಜರುಗಿಸಿರುತ್ತಾರೆ. ಸದರಿ ಕಾಲಕ್ಕೆ ನನ್ನ ಜೊತೆ ಇನ್ಸಪೆಕ್ಟರ್ , ಸಿಬ್ಬಂದಿಗಳು ಹಾಜರಿದ್ದರು.

<u>ಪಾಟೀಸವಾಲು:-</u> ಆರೋಪಿಪರ ವಕೀಲರಿಂದ.

ದಿ.26-05-2013 ರಂದು ಪೊಲೀಸರು ಸಿದ್ದಪ್ಪ ರವರ ಸೇವಾ ವರದಿ, ನಿವೃತ್ತಿ ಗಳಿಸಿದ ದಾಖಲೆಗಳನ್ನು ಕೋರಿರುತ್ತಾರೆ. ನಾನು ಸ್ಥಳ ಮಹಜರ್ ಗೆ ನಮ್ಮ ಕಛೇರಿಯಲ್ಲಿ ಸಿದ್ದಪ್ಪ ರವರು ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳದ ಮಹಜರ್ ಮಾಡಿದ್ದು, ಅದಕ್ಕೆ ಸಹಿ ಮಾಡಿರುತ್ತೇನೆ. ಮತ್ತೊಂದು ಸಹಿಯನ್ನು ಪೊಲೀಸರು ದಾಖಲೆಗಳನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ಪೊಲೀಸರು ನನ್ನ ಕಛೇರಿಗೆ ಬಂದು ಪಡೆದಿರುತ್ತಾರೆ. ಎಸ್ ಆರ್ ವಹಿಯನ್ನು ಜನ್ಮ ದಿನಾಂಕ ತಿದ್ದುಪಡಿ ಮಾಡಿದ ವಿಚಾರದಲ್ಲಿ ದಾಖಲೆಗಳನ್ನು ಪಡೆದಿರುತ್ತಾರೆ. ಆರೋಪಿ ಯಾವುದೇ ತಿದ್ದು ಪಡಿ ಮಾಡದಿದ್ದರೂ ನಾನು ತಿದ್ದುಪಡಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಸಾಕ್ಷಿದಾರರು, ನಾನು, ಸಿಬ್ಬಂದಿ, ಇನ್ಸಪೆಕ್ಟರ್ ಸ್ಥಳದಲ್ಲಿ ಹಾಜರಿದ್ದೇವು. ಸಾಕ್ಷಿದಾರರ ಹೆಸರು ಈಗ ನೆನಪಿರುವುದಿಲ್ಲ. ಸಿಬ್ಬಂದಿ ಸಿದ್ದಮ್ಮ ಪ್ರ.ದ.ಸ., ಹಾಜರಿದ್ದರು. ನನ್ನಿಂದ ಸದರಿ ಕಾಲಕ್ಕೆ ಮೂರು ದಾಖಲೆಗಳನ್ನು ಪೊಲೀಸರು ವಶಪಸಿಡಿಕೊಂಡಿರುತ್ತಾರೆ. ಪೊಲೀಸರು ನನ್ನಿಂದ ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿ.25-05-2013 ರಂದು ಮತ್ತು 26-06-2013 ರಂದು ಯಾರು ಪಂಚನಾಮೆ ಬರೆದರು ಎಂಬ ಪ್ರಶ್ನೆಗೆ ಸಾಕ್ಷಿ - ಪೊಲೀಸರು ಬರೆದುಕೊಂಡಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ಸದರಿ ಎರಡು ಪಂಚನಾಮೆಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ಕಾಲಕ್ಕೆ ಫೋಟೋ ತೆಗೆಸಲಾಗಿರುವುದಿಲ್ಲ. ನಿಪಿ.13 ರಲ್ಲಿ ನೀವು ನೀಡಿದ ದಾಖಲೆಗಳ ಮೇಲೆ ನಿಮ್ಮ ಯಾವುದಾದರೂ ಸಹಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ - ನಾನು ಅದರ ಮೇಲೆ ಸಹಿ ಮಾಡಿರುವುದಿಲ್ಲ, ಬೇರೆ ಯಾರಾದರೂ ಸಹಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.13 ರಲ್ಲಿ ಕ್ರಮ ಸಂಖ್ಯೆ 2 ರಲ್ಲಿ ಅಧಿಕೃತ ಜ್ಞಾಪನ ಎಂದು ತಿದ್ದಿ ಬರೆಯಲಾಗಿರುವುದನ್ನು ಸಾಕ್ಷಿಗೆ ತೋರಿಸಿ , ಯಾಕೆ ತಿದ್ದಲಾಯಿತು ಎಂಬ ಪ್ರಶ್ನೆಗೆ ಸಾಕ್ಷಿ - ಸದರಿ ತಿದ್ದುಪಡಿಯನ್ನು ಯಾವಾಗ ಮಾಡಲಾಗಿದೆ ಎಂದು ನನಗೆ ನೆನಪಿಲ್ಲ ಎನ್ನುತ್ತಾರೆ. ನಿಪಿ.13 ರ ಅಮಾನತ್ತು ಪಂಚನಾಮೆ ಯಾವಾ ಮಾಡಲಾಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ.8 ರ ದಾಖಲೆಗೆ ನಾನು ಒಂದು ಸಹಿ ಮಾಡಿರುತ್ತೇನೆ. ಪೊಲೀಸರು ನನ್ನಿಂದ ಯಾವುದೇ ಖಾಲಿ ಹಾಳೆಯ ಮೇಲೆ ಸಹಿ ಮಾಡಿಸಿಕೊಂಡಿರುವುದಿಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿಕೊಂಡಿರುವುದಿಲ್ಲ. ಆರೋಪಿ ತನ್ನ ಜನ್ಮ ದಿನಾಂಕವನ್ನು ತಿದ್ದು ಪಡಿ ಮಾಡಿದ ವಿಚಾರವಾಗಿ ಪೊಲೀಸರು ನನ್ನಿಂದ ದಾಖಲೆಗಳನ್ನು ಪಡೆದಿರುತ್ತಾರೆ. ಆರೋಪಿ ಜನ್ಮ ದಿನಾಂಕ ತಿದ್ದು ಪಡಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಯಾವ ಪ್ರಕರಣ ಹೂಡಲಾಗಿದೆ , ಯಾವ ಕಾಯಿದೆ ಅಡಿಯಲ್ಲಿ ಅಪರಾಧ ಎಸಗಿದ್ದಾರೆ ಎಂದು ನನಗೆ ಗೊತ್ತಿಲ್ಲ.

ದಿ.25-05-2013 ರಂದು ಮಾಡಿದ ಪಂಚನಾಮೆಯನ್ನು ಕಛೇರಿಯ ವೇಳೆಯಲ್ಲಿ ಮಧ್ಯಾಹ್ನದ ಸಮಯದಲ್ಲಿ ಮಾಡಿರುತ್ತಾರೆ. ನಿಖರವಾಗಿ ಈಗ ಹೇಳಲು ಆಗುವುದಿಲ್ಲ. ಸಾಕ್ಷಿದಾರರು ಯಾರು ಯಾರು ನಿಪಿ.8 ಕ್ಕೆ ಸಹಿ ಮಾಡಿರುತ್ತಾರೆ ಎಂದು ಈಗ ಹೇಳಲು ಆಗುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಠಾಣೆಯಲ್ಲಿ ನಿಪಿ.8 , 13 ರ ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊನ್ನಾಳಿ.